
## ನಾಗತಿಹಳ್ಳಿ ಚಂದ್ರಶೇಖರ



ಕಥೆಗಾರ, ಕಾದಂಬರಿಕಾರ, ಸಿನಿಮಾ ನಿರ್ದೇಶಕ, ಗೀತರಚನೆಕಾರ ನಾಗತಿಹಳ್ಳಿ ಚಂದ್ರಶೇಖರ ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕಿನ ನಾಗತಿಹಳ್ಳಿಯವರು. ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ.

ಓದುಗರನ್ನು ಒಲಿಸಿಕೊಳ್ಳುವಂತೆ ಬರೆದ, ಜನರು ಮುದಗೊಳ್ಳುವಂತೆ ಸಿನಿಮಾಗಳನ್ನು ಮಾಡಿದವರು ನಾಗತಿಹಳ್ಳಿ. ಕೆಲದಶಕಗಳ ಹಿಂದೆ ಕನ್ನಡದ ಈಗಿನ ಮುಂಚೂಣಿಯ ಕಥೆಗಾರರ ಕಥೆಗಳ ಜೊತೆಗೆ ನಾಗತಿಹಳ್ಳಿ ಅವರ ಕಥೆಗಳೂ ಪತ್ರಿಕೆಗಳಲ್ಲಿ ಕಾಣಿಸಿಕೊಳ್ಳುತ್ತಿದ್ದವು.

1985ರಲ್ಲಿ ಮೈಸೂರು ವಿಶ್ವವಿದ್ಯಾಲಯದಿಂದ ಎಂಟು ಚಿನ್ನದ ಪದಕಗಳೊಂದಿಗೆ ಕನ್ನಡ ಎಂ.ಎ. ಪದವಿಯನ್ನು ನಾಗತಿಹಳ್ಳಿ ಪಡೆದರು. ಕಥೆ, ಕಾದಂಬರಿಗಳ ಬರವಣಿಗೆ, ಅಧ್ಯಾಪನಗಳ ಜೊತೆಗೇ ಅವರು ಸಿನಿಮಾಗಳಿಗೂ ಕೆಲಸ ಮಾಡಲು ಶುರುಮಾಡಿದರು. ಅವರು ಮೊದಲ ಸಿನಿಮಾಕ್ಕೆ ಕೆಲಸ ಮಾಡಿದ್ದು 'ಕಾಡಿನ ಬೆಂಕಿ'ಗೆ ಸಂಭಾಷಣೆ ಬರೆಯುವುದರ ಮೂಲಕ. 'ಕೊಟ್ರೇಶಿ ಕನಸು', 'ಅಮೆರಿಕ ಅಮೆರಿಕ', 'ಹೂಮಳೆ', 'ಅಮೃತಧಾರೆ', 'ಮಾತಾಡ್ ಮಾತಾಡು ಮಲ್ಲಿಗೆ' ಅವರ ನಿರ್ದೇಶನದ, ಜನಮಾನಸವನ್ನು ಮುಟ್ಟಿದ ಕೆಲವು ಸಿನಿಮಾಗಳಾಗಿವೆ. ಅವರು ಈತನಕ 13 ಸಿನಿಮಾ, ಕಿರುತೆರೆಯ 10 ಧಾರಾವಾಹಿಗಳನ್ನು ನಿರ್ದೇಶಿಸಿದ್ದಾರೆ. 'ಇಷ್ಟಕಾಮ್ಯ' ಅವರ ಇತ್ತೀಚಿನ ಸಿನಿಮಾ.

ಒಂಬತ್ತು ಕಥಾಸಂಗ್ರಹಗಳು, ಮೂರು ಕಾದಂಬರಿಗಳು, ಆರು ಪ್ರವಾಸ ಕಥನಗಳು, 11 ಅಂಕಣಬರಹಗಳ ಪುಸ್ತಕಗಳನ್ನು ಪ್ರಕಟಿಸಿರುವ ಅವರು, ಮೂರು ಪುಸ್ತಕಗಳನ್ನು ಸಂಪಾದಿಸಿದ್ದಾರೆ. ಇವೂ ಸೇರಿದಂತೆ ಅವರ 33 ಪುಸ್ತಕಗಳು ಪ್ರಕಟವಾಗಿವೆ.

ಧ್ವನಿಪೂರ್ಣವಾಗಿ ದುಡಿಸಿಕೊಳ್ಳುವುದು. ಇಲ್ಲಿನ ಸಫಲ ಕಥೆಗಳೆಂದರೆ, 'ಸಾವು ಮತ್ತು ಮದುವೆ', 'ಗತಿಶೀಲ' ಮತ್ತು 'ಹದ್ದುಗಳು' ಎಂದು ಗುರ್ತಿಸಿದ್ದರು.

ಹಿನ್ನೋಟದಲ್ಲಿ ಹಲವು ಅರ್ಥಗಳು ಹೊಳೆಯುತ್ತಿವೆ. 'ಆವರ್ತ'ದಿಂದ 'ಹೋರಿ'ವರೆಗೆ ನೂರು ಕಥೆಗಳು ದಾಟಿವೆ. ನನ್ನಂತೆಯೇ ಇರಬಹುದಾದ, ಗ್ರಹಿಸಬಹುದಾದ ಓದುಗನೊ/ಳೊ ಮಾತ್ರ ನನ್ನೆದುರಿಗಿದ್ದು ಬರೆಸುತ್ತಾರೆ. ಗುರು ಹಿರಿಯರು, ಆಪ್ತರು ಮತ್ತು ವಿಮರ್ಶಕರು